2024 april

20

SUNADAY

# vijayavani

## paper headlines

## magazine headlines

## ozone layer news



### ಭೂಮಿಗೆ ಕವಚವಾಗಿಸಿ ಓಝೋನ್ ದಿನಾಚರಣೆ

ಮಕ್ಕಳಿಗಾಗಿ ಕಿರುಚಿತ್ರ ನಿರ್ಮಾಣ ತರಬೇತಿ ಆರಂಭ
‘ಫಸ್ಟ್ ಶೂಟ್‘ ಪ್ರಾದೇಶಿಕ ಮಟ್ಟದ ಕಾರ್ಯಾಗಾರ

ಕಟ್ಟಪ್ಪನ: ಇಡುಕ್ಕಿ ಡಯಟ್ ಮತ್ತು ಎಸ್.ಸಿ. ಇಲಾಖೆ, ಇಡುಕ್ಕಿಯು ಜಂಟಿಯಾಗಿ ಹೈಸ್ಕೂಲ್ ಮತ್ತು ಹೈಯರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ನಡೆಸುವ ಕಿರುಚಿತ್ರ ನಿರ್ಮಾಣ ತರಬೇತಿ ಕಾರ್ಯಕ್ರಮವಾದ "ಫಸ್ಟ್ ಶೂಟ್" ನ ಕಟ್ಟಪ್ಪನ ಪ್ರದೇಶ ಮಟ್ಟದ ಕಾರ್ಯಾಗಾರವು ಕಟ್ಟಪ್ಪನ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಆರಂಭಿಸಲಾಗಿದೆ. ಕಟ್ಟಪ್ಪನ ಜಿಲ್ಲಾ ಶಿಕ್ಷಣಾಧಿಕಾರಿ ಮುರಳೀಧರನ್ ರವರು ಉದ್ಘಾಟಿಸಿದರು. ಕಟ್ಟಪ್ಪನ ಸರಕಾರಿ ಹೈಯರ್ ಸೆಕೆಂಡರಿ ಶಾಲೆಯ ಪ್ರಾಂಶುಪಾಲರಾದ ಮಿನಿ ಐಸಾಕ್ ಅಧ್ಯಕ್ಷತೆ ವಹಿಸಿದ್ದರು. ಡಯಟ್ ಹಿರಿಯ ಉಪನ್ಯಾಸಕರು ಹಾಗೂ ಕಿರುಚಿತ್ರ ಯೋಜನೆಯ ಸಂಯೋಜಕ ಡಾ. ಅಜಯಘೋಷ್ ಯೋಜನೆಯ ವಿವರಣೆಯನ್ನು ನೆರವೇರಿಸಿದರು. ಚಿತ್ರಕಥೆ, ನಿರ್ದೇಶನ, ನಟನೆ, ಛಾಯಾಗ್ರಹಣ, ಸಂಪಾದನೆ ಮತ್ತು ಪೋಸ್ಟ್ ಪ್ರೊಡಕ್ಷನ್ ಕ್ಷೇತ್ರಗಳ ಪರಿಣಿತರಿಂದ ತರಗತಿಗಳನ್ನು ನಡೆಸಲಾಯಿತು. ಜಿ ಎಚ್ ಎಸ್ ಎಸ್ ಕಟ್ಟಪ್ಪನ, ಜಿ ವಿ ಎಚ್ ಎಸ್ ಎಸ್ ನೆಡುಂಕಂಡಂ ಹಾಗೂ ಜಿ ಎಚ್ ಎಸ್ ಶಾಂತಿಗ್ರಾಮ ಶಾಲೆಗಳಿಂದ ಆಯ್ಕೆಯಾದ 30 ವಿದ್ಯಾರ್ಥಿಗಳು ತರಬೇತಿಯಲ್ಲಿ ಭಾಗವಹಿಸುತ್ತಿದ್ದಾರೆ. ತರಬೇತಿಯ ಕೊನೆಯಲ್ಲಿ ಪ್ರತಿ ಶಾಲೆಯು ಒಂದು ಕಿರುಚಿತ್ರದಂತೆ ಜಿಲ್ಲೆಯಾದ್ಯಂತ 32 ಕಿರುಚಿತ್ರಗಳು ಜನ್ಮ ತಾಳುತ್ತವೆ. ಎಚ್ ಎಂ ಹರಿನಾಥನ್, ಎನ್ ಕಲಾಧರನ್, ಎನ್ ಕೆ ರಶ್ಮಿತಾ, ಸ್ವರಾಜ್, ಹರಿಹರನ್ ಮಾಸ್ಟರ್ ಮೊದಲಾದವರು ಭಾಗವಹಿಸಿದರು.



### ಓಝೋನ್ ದಿನಾಚರಣೆ

ಓಝೋನ್ ದಿನಾಚರಣೆಯ ಅಂಗವಾಗಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗಾಗಿ ವಿವಿಧ ಸ್ಪರ್ಧೆಗಳನ್ನು ನಡೆಸಲಾಯಿತು.ಅಧ್ಯಾಪಕ ತರಬೇತಿಗೆ ಆಗಮಿಸಿದ ವಿದ್ಯಾರ್ಥಿಗಳು ಈ ಕಾರ್ಯಕ್ರಮವನ್ನು ಆಯೋಜಿಸಿದರು. ಪೋಸ್ಟರ್ ಬರವಣಿಗೆ ಹಾಗೂ ರಸಪ್ರಶ್ನೆ ಸ್ಪರ್ಧೆ ನಡೆಸಿ ಉತ್ತಮ ಸ್ಥಾನವನ್ನು ಪಡೆದವರಿಗೆ ಬಹುಮಾನ ವಿತರಿಸಲಾಯಿತು. ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿನಿಯರಾದ ದೇವಿಕಾ.ಪಿ ಮತ್ತು ಅಫ್ನಾಲ್.ಕೆ ಅವರಿಗೆ ಹಿರಿಯ ಅಧ್ಯಾಪಕರಾದ ಪಿ.ಪವಿತ್ರನ್ ಬಹುಮಾನವನ್ನು ನೀಡಿದರು. ಪೋಸ್ಟರ್ ಪ್ರದರ್ಶನದ ಉದ್ಘಾಟನೆಯನ್ನು ಶಾಲಾ ವಿಜ್ಞಾನ ಕ್ಲಬ್ ಸಂಚಾಲಕ ಸಂತೋಷ್.ಕೆ ನಿರ್ವಹಿಸಿದರು. ವಿಜ್ಞಾನ ಶಿಕ್ಷಕ ಬಿನುಮೋನ್ ಅವರು ವಾಯು ಮಾಲಿನ್ಯ ಮತ್ತು ಓಝೋನ್ ಪದರಗಳ ಕುರಿತು ವಿವರಿಸಿ ಸ್ಲೈಡ್ ಶೋ ನಡೆಸಿದರು.